ಶ್ರೀ ಎಚ್. ಬಿ. ಜ್ವಾಲನಯ್ಯ.—ಮುಖ್ಯ ಮಂತ್ರಿಗಳು ಮೈಸೂರು ಇಂಡಸ್ಟ್ರಿಯಲ್ ಕೋಆಪರೇಟಿವ್ ಬ್ಯಾಂಕಿನ ಒಂದು ಸಭೆಯಲ್ಲಿ ಸುಮಾರು 14 ಕೋಟಿ ರೂಪಾಯಿಗಳನ್ನು ಸಣ್ಣ ಕೈಗಾರಿಕೆಗಳಿಗೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೊಡುವುವಾಗಿ ಹೇಳಿದ್ದರು. ಈಗ ಅವರು ಹೇಳಿದ್ದರಲ್ಲಿ ಮುಕ್ಕಾಲು ಪರ್ಸೆಂಟಿಗಿಂತ ಕಡಮೆ ಹಣ ಒದಗಿಸಿರುವುದರಿಂದ ಇದನ್ನು ಪರಿಶೀಲನುತ್ತೀರಾ ?

† ಶ್ರೀ ಎ. ಪಿ. ಅಪ್ಪಣ್ಣ.—14 ಕೋಟಿಯನ್ನು ಸ್ಮಾರ್ ಸ್ಕೇರ್ ಇಂಡಸ್ಟ್ರೀಸ್, ಎರೇಜ್ ಇಂಡಸ್ಟ್ರೀಸ್ ಹ್ಯಾಂಡಿಕ್ರಾಫ್ಟ್ಸ್‌ಗೆ ಕೊಟ್ಟಿರುವುದು ನಿಜ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಇಲ್ಲಿ 14 ಐಟಂ ಇವೆ. 375 ಲಕ್ಷ ರೂಪಾಯಿಗಳನ್ನು ಯಾವ ರೀತಿ ಹಂಚಲಾಗುವುದು ? ದೊಡ್ಡ ಕೈಗಾರಿಕೆಗಳಿಗೆ ಹೆಚ್ಚು ಸಹಾಯ ಮಾಡುವುದಕ್ಕಿಂತ ಸಣ್ಣ ಕೈಗಾರಿಕೆಗಳಿಗೆ ಹೆಚ್ಚು ಸಹಾಯ ಮಾಡುವುದು ಸೂಕ್ತವಲ್ಲವೇ ?

ಶ್ರೀ ಎ. ಪಿ. ಅಪ್ಪಣ್ಣ.—375 ಲಕ್ಷದಲ್ಲಿ ಸುಮಾರು 125 ಲಕ್ಷ ಸಾಲ ಮತ್ತು ಕೆಲವು ಭಾಗ ಗ್ರಾಂಟ್ ಇನ್ ಏಡ್ ಇವೆ. ಕಾರ್ಪೆಂಟ್ರಿ, ಸ್ಮಿತಿ ಮತ್ತು ಪ್ಲೈನಿಂಗ್ ಪ್ರೋಗ್ರಾಂಗೆ ನಾಲ್ಕನೆಯ ಯೋಜನೆಯಲ್ಲಿ ಕಡಮೆ ಒದಗಿಸಿದೆ.

ಶ್ರೀ ಎಂ. ಎಸ್. ಕೃಷ್ಣನ್.—ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಒಟ್ಟು ವೆಚ್ಚ 375 ಲಕ್ಷ ಎಂದು ಹೇಳಿದೆ. ಈಗ ಪ್ರತಿ ವರ್ಷ ಒಂದು ಯೋಜನೆ ಮಾಡುತ್ತಿರುವುದರಿಂದ ಇದರಲ್ಲಿ ಸ್ಮಾರ್ ಸ್ಕೇರ್ ಇಂಡಸ್ಟ್ರೀಸ್ ಸ್ಥಾನವೇನು ? ಇದಕ್ಕೆ ಎಷ್ಟು ಔಟ್‌ಲೇ ಮಾಡಿರುವುದು ?

ಶ್ರೀ ಎ. ಪಿ. ಅಪ್ಪಣ್ಣ.—1969-70 ರಲ್ಲಿ 90 ಲಕ್ಷ ಕೊಟ್ಟಿದೆ.

Restoration of Doddakere Tank

544. Sri K. P. CHIKKEGOWDA (Sakaleshpur).—

Will the Minister of State for Minor Irrigation be pleased to state :—

(*a*) the date and the amount of estimated cost of restoration of Doddakere of Gangara (Major tank) of Kundur Hobli, Alur Taluk (Hassan District) ;

(*b*) the circumstances that led for its delay in execution ?

Sri D. PARAMESHWARAPPA (Deputy Minister for Major Irrigation) [On behalf of SRI A. J. DODDAMETI (Minister of State for Minor Irrigation)].—

(*a*) An estimate amounting to Rs. 25,000 is prepared now.

(*b*) Does not arise *vide* reply to (*a*).

2-00 P.M.

ಶ್ರೀ ಕೆ. ಪಿ. ಚಿಕ್ಕೇಗೌಡ.—ಅಂದಾಜನ್ನು ತಯಾರು ಮಾಡುವುದಕ್ಕೆ ಎರಡು ವರ್ಷಗಳ ಕಾಲ ಆಯಿತು ಇನ್ನು ಮುಂಜೂರು ಮಾಡುವುದಕ್ಕೆ ಎಷ್ಟು ವರ್ಷಕಾಲ ಬೇಕಾಗುತ್ತದೆ ?

† ಶ್ರೀ ಡಿ. ಪರಮೇಶ್ವರಪ್ಪ.—ಅಂದಾಜು ತಯಾರು ಮಾಡುವುದಕ್ಕೆ ಎರಡು ವರ್ಷ ಹಿಡಿದಿದೆ ಎಂದು ನಾವೇನೂ ಹೇಳಿಲ್ಲ. ಇತ್ತೀಚೆಗೆ ಇನ್‌ವೆಸ್ಟಿಗೇಷನ್ ಆಗಿ ಆ ಅಂದಾಜು ಪರಿಶೀಲನೆಯಲ್ಲಿ ಇದೆ ಎಂಬುದನ್ನು ಹೇಳಿದ್ದೇವೆ, ಅದನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದಲ್ಲಿರತಕ್ಕ ಆರ್ಥಿಕ ಪರಿಸ್ಥಿತಿಯ ಮೇಲೆ ಅದು ಅನ್ವಯವಾಗುತ್ತದೆ. ಇದು ಮುಖ್ಯವಾದ ಕೆರೆ ಎಂದು ಹೇಳುತ್ತಾ ಇದ್ದಾರೆ, ಜಾಗ್ರತೆ ತೆಗೆದುಕೊಳ್ಳುವುದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಪಿ. ಚಿಕ್ಕೇಗೌಡ.- ಅದಷ್ಟು ಜಾಗ್ರತೆ ತೆಗೆದುಕೊಳ್ಳುತ್ತೇವೆ ಎಂದು ಭರವಸೆ ಕೊಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಹಾಗೆ ಭರವಸೆ ಕೊಡುವುದಕ್ಕಾಗುವುದಿಲ್ಲ. ಹಣ ಒದಗಿದಂತೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇವೆ.

Installation of I.P. sets

582. Sri C. R. RANGE GOWDA (Magadi).—

Will the Chief Minister be pleased to state :—

(*a*) the number of Irrigation Pump sets installed in the village of Hosadoddi, Madbal Hobli of Magadi Taluk;

(*b*) whether the completion certificate in respect of those Irrigation Pump sets has been issued ;

(*c*) if so, when ;

(*d*) what are the bottlenecks to give power line to that village ?

Sri D. PARAMESHWARAPPA (Deputy Minister for Major Irrigation) [On behalf of SRI VEERENDRA PATIL (Chief Minister)].—

(*a*) 4.

(*b*) Completion reports have been received from the parties.

(*c*) On 10th November 1968.

(*d*) The completion reports received were found to be wrong as interior wiring was not actually completed. Besides, the parties have not carried out the departmental formalities like execution of agreement, etc.

ಶ್ರೀ ಸಿ. ಆರ್. ರಂಗೇಗೌಡ.—ಮಾಗಡಿ ತಾಲ್ಲೂಕಿನ ಹೊಸ ದೊಡ್ಡಿಗೆ ಎಲೆಕ್ಟ್ರಿಕ್ ಲೈನ್ ಕೊಡುವ ಬಗ್ಗೆ ಸ್ಥಳೀಯ ವಿದ್ಯುಚ್ಛಕ್ತಿ ಇಲಾಖೆಯ ಅಧಿಕಾರಿಯ ನೇತೃತ್ವದಲ್ಲಿ ಪ್ರತಿಯೊಂದು ಕೆಲಸವನ್ನು ಮಾಡಿದರೂ ಕೂಡ ಅವರಿಗೆ ಮನದಟ್ಟು ಆದರೂ ಕೂಡ ಇನ್ನರ್ ವೈರಿಂಗ್ ಮಾಡಿಲ್ಲ ಮತ್ತು ಅಗ್ರಿಮೆಂಟ್ ಎಕ್ಸಿಕ್ಯೂಟ್ ಮಾಡಿಲ್ಲ ಎಂದು ಹೇಳಿ ತಕರಾರು ಹಾಕಿದ್ದಾರೆ. ಆದ್ದರಿಂದ ಸ್ಥಳ ಪರಿಶೀಲನೆ ಮಾಡಿ ಜಾಗ್ರತೆ ಎಲೆಕ್ಟ್ರಿಕ್ ಲೈನ್ ಕೊಡಿಸುವುದಕ್ಕೆ ತಿಳಿಸುತ್ತೀರಾ ?

† ಶ್ರೀ ಡಿ. ಪರಮೇಶ್ವರಪ್ಪ.—ಇದುವರೆಗೂ ಅಂತಹ ದೂರು ಬಂದಿಲ್ಲ, ಬಹುಶಃ ಅಧೀನರುಗಳ ನ್ಯೂನತೆಯಿಂದ ಹೀಗೆ ಆಗುತ್ತದೆ ಎಂಬುದು ಗೊತ್ತಿರಲಿಲ್ಲ, ಮಾನ್ಯ ಸದಸ್ಯರು ಈಗ ಹೇಳುತ್ತಾ ಇದ್ದಾರೆ, ಅದಷ್ಟು ಜಾಗ್ರತೆ ಸ್ಥಳ ಪರಿಶೀಲನೆ ಮಾಡಿ ಅವರು ಹೇಳುವುದು ನಿಜವೇ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಸಿ. ಆರ್. ರಂಗೇಗೌಡ—ಎಲೆಕ್ಟ್ರಿಕ್ ಪಂಪ್ ಸೆಟ್‌ನ್ನು ಕಮ್ಯೂನಿಟಿ ಡೆವಲಪ್‌ಮೆಂಟ್ ನವರು ಕೊಟ್ಟು ಐದು ವರ್ಷವಾಯಿತು ಯಾವ ಕೆಲಸವೂ ಆಗಿಲ್ಲ. ಅವರು ಹಣ ವಾಪಸು ಪಾವತಿ ಮಾಡಬೇಕೆಂದು ಕೇಳುತ್ತಾ ಇದ್ದಾರೆ, ಉತ್ತರವನ್ನು ಇಲ್ಲದೇ ಕೊಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಜಾಗ್ರತೆ ಅಲ್ಲಿ ಸ್ಥಳ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ಪರಮೇಶ್ವರಪ್ಪ.—ಡಿಪಾರ್ಟ್‌ಮೆಂಟಿನವರು ವಿದ್ಯುತ್‌ನ್ನು ಸಪ್ಲೈ ಮಾಡುವುದಕ್ಕೆ ಮುಂಚೆ ಪಾರ್ಟಿಸ್ ಕಂಪ್ಲೀಷನ್ ರಿಪೋರ್ಟ್ ಕೊಡಬೇಕು ಮತ್ತು ಅಗ್ರಿಮೆಂಟ್ ಕೂಡ ಬರೆದು ಕೊಡಬೇಕೆಂದು ನಿಯಮಗಳು ಇವೆ. ಕಂಪ್ಲೀಷನ್ ರಿಪೋರ್ಟ್ ಕೊಟ್ಟಿದ್ದೇವೆ ಅಂದಮೇಲೆ ಇನ್ನರ್